# ಎನ್‌ಐಟಿಕೆ ತೀರದಲ್ಲಿ ಎಐ ಸಂಶೋಧನಾ ಕೇಂದ್ರ



**ಮಂಗಳೂರು:** ಸುರತ್ಕಲ್‌ನಲ್ಲಿರುವ ರಾಷ್ಟ್ರೀಯ ತಾಂತ್ರಿಕ ಸಂಸ್ಥೆ ಕರ್ನಾಟಕ (ಎನ್‌ಐಟಿಕೆ), ನೊಮ್ಯಾಡ್ (ನೋಡ್ ಫಾರ್ ಓಪನ್ ಸೋರ್ಸ್ ಮೊಬೈಲ್ ಎಐ ಡಿಪ್ಲಾಯ್‌ಮೆಂಟ್) ಎಂಬ ಎಐ ಸಂಶೋಧನಾ ಕೇಂದ್ರವನ್ನು ಪ್ರಾರಂಭಿಸಿದೆ. ಇದನ್ನು ದೂರದ, ಸಂಪರ್ಕರಹಿತ ಪ್ರದೇಶಗಳು ಹಾಗೂ ವಿಪತ್ತು ಪೀಡಿತ ಪರಿಸರಗಳಲ್ಲಿ, ಸಾಮಾನ್ಯ ಕ್ಲೌಡ್ ಸೌಕರ್ಯ ಲಭ್ಯವಿಲ್ಲದ ಸಂದರ್ಭಗಳಲ್ಲಿ ಬಳಸಲು ವಿನ್ಯಾಸಗೊಳಿಸಲಾಗಿದೆ. ಎನ್‌ಐಟಿಕೆ ಕಡಲ ತೀರದ 'ಸರ್ಚ್' ಸಂಶೋಧನಾ ಕೇಂದ್ರದಲ್ಲಿ, ಪುನರ್‌ಬಳಕೆ ಮಾಡಲಾದ ಶಿಪ್ಪಿಂಗ್ ಕಂಟೈನರ್‌ನಲ್ಲಿ 'ನೊಮ್ಯಾಡ್' ಕೇಂದ್ರವನ್ನು ಸ್ಥಾಪಿಸಲಾಗಿದೆ. ಇದು ಸ್ವಯಂ ಆಗಿ ಕಾರ್ಯ ನಿರ್ವಹಿಸುವ ಸಾಮರ್ಥ್ಯ ಹೊಂದಿದೆ. ಗ್ರಿಡ್, ಸೌರ, 15 ಕೆಡಬ್ಲ್ಯೂ ಸೌರ- ಬ್ಯಾಟರಿ ಘಟಕ ಮತ್ತು ಯುಪಿಎಸ್ ಹೊಂದಿದ ಡೀಸೆಲ್ ಜನರೇಟರ್‌ನಿಂದ ಇದಕ್ಕೆ ವಿದ್ಯುತ್ ಸಂಪರ್ಕ ಒದಗಿಸಲಾಗಿದೆ. ಎನ್ ಐಟಿಕೆ ಸಹ ಪ್ರಾಧ್ಯಾಪಕ ಡಾ. ಪೃಥ್ವಿರಾಜ್ ಯು. ಅವರ ಕಲ್ಪನೆಯಲ್ಲಿ ಈ ಕೇಂದ್ರ ಸ್ಥಾಪನೆಗೊಂಡಿದೆ. ಭೂಕುಸಿತ ಮತ್ತು ಪ್ರವಾಹಗಳಂತಹ ಘಟನೆಗಳ ಸಂದರ್ಭ ಇದು ಉಪಯೋಗಕ್ಕೆ ಬರಲಿದೆ ಎಂದು ಎನ್ ಐಟಿಕೆ ಪ್ರಕಟಣೆ ತಿಳಿಸಿದೆ.

Kannada Prabha, Date: 12/04/2026 , p.03